Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 28 ಸಂಚಿಕೆ 170] ಬುಧವಾರ 28—3—45 [3 ಪೈ

ಹಿಟ್ಲರ್

ಮರೆಯಾಗಿರುವ ಸ್ಥಳ

ದಕ್ಷಿಣ ಬವೇರಿಯಾದಲ್ಲಿ ಸೋಡಲು ಎರಡು ಕಣ್ಣು ಸಾಲದ ಪ್ರಶಾಂತ ಮೈಲಿ ಉದ್ದಗಲವಿರುವ ಬೆಟ್ಟಗುಡ್ಡ ಪ್ರದೇಶದಲ್ಲಿ ಹಿಟ್ಲರ್‌ನ ಗೋಪ್ಯದ ವಸತಿ ಇದೆ. ಈಗ ಇದನ್ನು ಜರ್ಮನಿಯ ಸುರಿತ ಸೈನೀಕರು ಭದ್ರವಾಗಿ ಕಾಯುತ್ತಿರುವರು. ಇದೇ ಹಿಟ್ಲರಿನ ಹಳ್ಳಿಗಾಡಿನ ಮನೆ ಬೆರ್‌ಚ್ಟೆಸ್‌ಗಾಡನ್ನಿನ ಬರ್‌ಗಾಫ್.

ಹಳ್ಳಿಯಲ್ಲಿದ್ದರೂ ಜನರ ಮನಸ್ಸನ್ನು ತೆರೆಯುವ ರೀತಿಯಲ್ಲಿ ಈಗಿನ ಕಾಲಕ್ಕೆ ತಕ್ಕ ರೀತಿಯಲ್ಲಿ ಕಟ್ಟಿದೆ. ಈ ಮನೆಯಲ್ಲಿ ಜೋಡಿಸಿರುವ ಸಾಮಾನುಗಳನ್ನು ನೋಡಿದರೆ ಎಂಥವರಿಗಾದರೂ ಅಲ್ಲಿರಲು ಮನಸ್ಸಾಗುವುದು. ಇಲ್ಲಿ ಹಿಟ್ಲರ್ ತನ್ನ ಆಪ್ತರ ಸಂಗಡ ಮಾತನಾಡುವನು, ಈ ಮನೆಗೆ ಒಂದು ಸಣ್ಣ ಪುಟ್ಟಡಿ ಇಜೆ. ಇವನ್ನು ಗಾಜಿನಿಂದಲೇ ಕಟ್ಟಿರುವರು. ಇದನ್ನು ಹತ್ತಿನಿಂತರೆ ಹಿಟ್ಲರ್ ಜನ್ಮಭೂಮಿಯಾದ ಆಸ್ಟ್ರೀಯವನ್ನು ನೋಡಬಹುದು. ಇಲ್ಲಿ ವಾಸವಾಗಿರುವವರನ್ನು ಯಾರೂ ಪತ್ತೆ ಹಚ್ಚುವ ಹಾಗಿಲ್ಲವೆನ್ನುತ್ತಾರೆ.

ಈ ಹಳ್ಳಿಗಾಡಿನ ಮನೆಯ ಹತ್ತಾರು ಫಾಸಲೆಯಲ್ಲಿರುವ ರೈತರನ್ನೆಲ್ಲಾ ಓಡಿಸಿ, ಅವರ ವಾಸಸ್ಥಳಗಳು ಹಿಟ್ಲರ್‌ನ ಆಪ್ತರಿಗೆ ಕೊಡಲಾಗಿದೆ. ಹಣವನ್ನು ನೀರಿನ ಹಾಗೆ ಚೆಲ್ಲಿ ಈ ಪ್ರದೇಶವನ್ನು ಇಂದ್ರಭವನವನ್ನಾಗಿ ಮಾಡಿರುವರು. ಇಲ್ಲಿಗೆ ಒಂದು ವೈಲಿಯಲ್ಲಿರುವ ಮತ್ತೊಂದು ಗುಡ್ಡದಲ್ಲಿ ರಷ್ಯಕ್ ಸ್ಪೋಲಿಷ್ ಅಧಿಕಾರಿ ಕೈದಿಗಳನ್ನು ಬಂಧಿಸಲಾಗಿತ್ತು.

ಈ ಬೆಟ್ಟ ಗುಡ್ಡದ ಹಳ್ಳಿ ಮನೆಗೆ ಹೋಗಿಬರಲು ಸಣ್ಣಸಣ್ಣ ಅನೇಕ ಮಾರ್ಗಗಳಿವೆ. ಗುಹೆಗೆ ಪ್ರಾರಂಭದಲ್ಲಿ ಬಹು ಬಲವಾದ ತಾಂಬ್ರದ ತಗಡಿನಿಂದ ಮಾಡಿದ ಬಾಗಿಲಿದೆ. ಇದು ಭೂಮಟ್ಟಕಿಂತ ೫೫೦ ಅಡಿ ಮೇಲಿದೆ. ಶ್ರೀರಂಗಪಟ್ಟಣವನ್ನು ಹೋಲಿಸಿ ನೋಡಿ

ಅಲ್ಲಿ ಹತ್ತಿರವಿರುವ ಅಂಟಿಸರ್ಸ್‌ಬರ್ಗ್ ಗುಹೆಯಲ್ಲಿ ದೊಡ್ಡ ಮೋಟಾರ್ ಖಾನೆಯಿದೆ ಇಲ್ಲಿ ನಾನಾ ಬಗೆಯ ಆಹಾರ ಪದಾರ್ಥ ಶೇಖರವಾಗಿದೆ. ಕಡಿಮುಲು ಸಿನೀರಿದೆ. ಆಯುಧಗಳು ಯುದ್ಧಾಸ್ತ್ರಗಳೂ, ಸಿಡಿಗುಂಡುಗಳೂ ಇವೆಲ್ಲಾ ಹೇರಳವಾಗಿ ಶೇಖರಿಸಲಾಗಿದೆ. ಈ ಗುಹೆಯಲ್ಲಿ ಏಕಕಾಲದಲ್ಲಿ ೬೦

ಆಸ್ಟ್ರಿಯಾ ಮೇಲೆ
ನಾಲ್ಕು ಕಡೆಗಳಿಂದ ಮುತ್ತಿಗೆ

ಆಸ್ಟ್ರಿಯಾ ಯುಗೋಸ್ಲೋವಿಯಾ ಗಡಿಯಲ್ಲಿ ಜರ್ಮನಿಗೂ ಮಿತ್ರರಿಗೂ ಭೀಕರವಾದ ಕದನವಾಗುತ್ತಿದೆ.

ಮುಂಬೈನಲ್ಲಿ ಹೋಟಲುಗಳೆಲ್ಲಾ ಏಪ್ರಿಲ್ 1 ರಿಂದ ಮುಷ್ಕರ ಹಿಡಿದು ಬಂದಾಗುವುವಂತೆ, ಅವರಿಗೆ ಪೊಲೀಸ ಪ್ರಭಾ ಸತಬದಾಜು ಮಾಡುತ್ತಿರುವುದನ್ನು ಪ್ರತಿಟಿಸಿ ಈ ರೀತಿ ಮುಷ್ಕರ ಮಾಡುವರಂತೆ.

ಈಜಿಪ್ಟಿನಲ್ಲಿ ಪಾಷಾ ಮತ್ತು ಬೀರಾಜ ಮರ್ಯಾದೆ ಇನ್ನು ಮುಂದೆ ವಜಾವಾಗಬೇಕೆಂದು ವಾಫ್ಡ ಮಂತ್ರಿಯೊಬ್ಬರು ಸಲಹೆ ಮಾಡಿರುತ್ತಾರೆ.

ಈಗಲ್ಲದಿದ್ದರೂ ಅಂತ್ಯಜಯ ನಮ್ಮದು. ದಕ್ಷಿಣ ಜರ್ಮನಿ. ಆಸ್ಟ್ರಿಯಾ. ಉತ್ತರ ಇಟಲಿ ಕಾಡುಗುಡ್ಡಗಳಲ್ಲಿ ಸೇರಿಕೊಂಡು ಯುದ್ಧಮಾಡುತ್ತೇವೆ, ಜಯಶೀಲರಾಗುತ್ತೇವೆ, ಗುಪ್ತಾಸ್ತ್ರ ಇನ್ನು ಬಹಳ ವಿದೆ, ಹೀಗೆಂದು ಕೈರೋದಲ್ಲಿರುವ ನಾಜಿ ಮಿಲಿಟರಿ ಅಧಿಕಾರಿ ಯೊಬ್ಬನು ಹೇಳುತ್ತಿರುವನು

ಯುದ್ಧಾನಂತರ ವಿಮಾನ ಕಾರ್ಯಾಚರಣೆಯಲ್ಲಿ ಜರ್ಮನ್ ವಿಮಾನಗಳಿಗೆ ಅವಕಾಶ ಕೊಡುವುದಿಲ್ಲ

ಶಾಂತಿ ಸಂಧಾನ ಎಲ್ಲಿ ನಡೆಯುತ್ತೆ ? ಶಾಂತಿ ಕರಾರು ಏಲ್ಲಾಗುತ್ತೆ ? ಅಮೇರಿಕಾದವರು ವಾಷಿಂಗ್ಟನ್ನಿನಲ್ಲಿ ಆಗಬೇಕೆನ್ನುತ್ತಾರೆ. ಫ್ರೆಂಚರು ಪ್ಯಾರಿಸ್ಸಿನಲ್ಲಿ ಆಗಬೇಕೆನ್ನುತ್ತಾರೆ. ರಷ್ಯನರು ಮಾಸ್ಕೋವಿನಲ್ಲಿ ಆಗಬೇಕೆನ್ನುತ್ತಾರೆ. ಬ್ರಿಟಿಷರೂ ಮಾತ್ರ ಇನ್ನೂ ಬಾಯಿ ಬಿಟ್ಟಿಲ್ಲ.

ಡೆಲ್ಲೀ ಕೇಂದ್ರ ಅಸೆಂಬ್ಲಿಯಲ್ಲಿ ಕಾಂಗ್ರೆಸ್-ಲೀಗ್ ಸದಸ್ಯರು ಹಣ ಕಾಸಿನ ಮಸೂದೆಯನ್ನು 58—52 ಓಟುಗಳಿಂದ ತಿರಸ್ಕರಿಸಿದರು. ವೈಸರಾಯರು ಶಿಫಾರಸ್ಸು ಮಾಡಬೇಕೆಂದು ಮತ್ತೆ ಸಂದೇಶ ಕಳುಹಿಸಿದರು. ಆದೂ 57—50 ಓಟುಗಳಿಂದ ತಿರಸ್ಕೃತವಾಯಿತು.

ಶತೃಗಳ ಬಿಡುಗಡೆಯಾದ ರಾಜ್ಯಗಳಲ್ಲಿ ಜನರ ಮುಖನೋಡಲಾರದ ಹಾಗಿದೆ. ತಿನ್ನಲಿಕ್ಕೆ ಆಹಾರ ಇಲ್ಲದೆ ಜನರು ತುಂಬ ಕಂಗೆಟ್ಟಿರುವರು

ಕಲಕತ್ತಾದಲ್ಲಿ ಬಟ್ಟೆಗಳ ಅಧಿಕ ದಸ್ತಾನು ಮಾಡಿದ್ದಕ್ಕೆಂದು ೩೦೦ ಅಂಗಡಿಗಳ ಬಾಗಿಲುಗಳಿಗೆ ಬೀಗಮುದ್ರೆಯಾಗಿದೆ. ೫ ಲಕ್ಷ ರೂಪಾಯಿಗಳ ಬಟ್ಟೆಯನ್ನು ಸರ್ಕಾರದ ವಶವಾಗಿದೆ.

ಲಂಡನ್ ಮೇಲೆ 'ವಿ' ಧಾಳಿ ಇನ್ನೂ ನಿಂತಿಲ್ಲ.

ಗಾಂಧೀಜೀಯವರು ಈ ಬೇಸಿಗೆಯನ್ನು ಆಂಧ್ರದಲ್ಲಿ ಕಳೆಯುವರು.

ಮೈಸೂರು ಡಿ॥ ಬೋರ್ಡ್ ಸೈಸ್ ಪ್ರೆಸಿಡೆಂಟ್

ಈ ದಿನವಷ್ಟೆ ನಡೆದ ಮೈಸೂರು ಡಿ॥ ಬೋರ್ಡ್ ಸೈಸ್ ಪ್ರೆಸಿಡೆಂಟ್ ಚುನಾವಣೆಯಲ್ಲಿ ಮಾ॥ ಟಿ. ಎಸ್. ಹೊನ್ನಪ್ಪ (ನ್ಯಾಷನಲಿಸ್ಟ್ ಪಾರ್ಟಿ) ನವರಿಗೆ 17 ಓಟುಗಳೂ, ಶ್ರೀ ಜಿ. ಮಲ್ಲಣ್ಣ (ಕಾಂಗ್ರೆಸ್) ನವರಿಗೆ 13 ಓಟುಗಳೂ ಬಂದು, ಶ್ರೀ ಹೊನ್ನಪ್ಪನವರು ಜಯಶೀಲರಾದರು. ಜಯಶೀಲರಾದವರಿಗೆ ನಮ್ಮ ಅಭಿನಂದನೆಗಳು.

ಮಾ॥ ಚರ್ಚಿಲ್ಲರು ರೈಕ್ ರಣರಂಗದಲ್ಲಿ ಮಿತ್ರರ ತಾಣ್ಯವನ್ನು ಪರೀಕ್ಷಿಸುತ್ತಿದ್ದಾಗ ಜರ್ಮನ್ ಷೆಲ್ ಒಂದು ಹತ್ತಿರ ಬಿದ್ದಿರು. ಅಪಯವೇನೂ ಆಗಲಿಲ್ಲ.

ಂ ಂ

ಹಿಂದಿನ ಮಹಾಯುದ್ಧದಲ್ಲಿ ಬ್ರಿಟಿಷ್ ಮುಖ್ಯಮಂತ್ರಿಗಳಾಗಿದ್ದ ಮಾ॥ ಲಯಡ್ ಜಾರ್ಜರು ದೈವಾಧೀನರಾದರು.

ಆಕಾಶವಾಣಿ 27—3—45

ವೈತಾಳಂತ ಬೆಳಿಗ್ಗೆ 8-50, ಮಧ್ಯಾಹ್ನ 2-50, ಸಾ. 6.30, 7.50, ರಾತ್ರಿ 10. ಬೆ. 8 ಹಾಡುಗಾರಿಕೆ. ನಂ. 2 ಹಾಡುಗಾರಿಕೆ. ಸಾ. 6 ಮೇಳವಾದ್ಯ 7-50 ಪುಸ್ತಕ ವಿಮರ್ಶೆ. ರಾ. 8 ಭಾರತ ವಚನ 8-15 ಶ್ರೀ ಲಕ್ಷ್ಮಿ ಸರಸ್ವತಿಯುವರ ಹಾಡುಗಾರಿಕೆ, 9-15 ಎಣಿ.



ಐ.ಜೆ. ಹಾಲ್, ಸರಾಫ್ ಅಂಗಡಿ
ರವೇ ಬೀದಿ, ಮೈಸೂರು.

ಮುಂಡಿ ವಾಸಿಮಾಡುವುದಕ್ಕೆ ಅನುಕೂಲ ಪಡಿಸಿದೆ. ಗುಹೆಯಲ್ಲಿ ಗಾಳಿಯಾಡಲು (ಏರ್ ಕಂಡೀಷನ್) ಅನುಕೂಲಪಡಿಸಿದೆ. ಇದನ್ನು ಎಂಥಾ ಬಾಂಬ್ ಗ್ಯಾಸ್ ಆದರೂ ತಡೆಯುವ ರೀತಿಯಲ್ಲಿ ಭದ್ರವಾಗಿ ಕಟ್ಟಿಂತ್ತಾರೆ.

ಇದರ ಪಕ್ಕದಲ್ಲೇ ಮತ್ತೊಂದು ಗುಡ್ಡದಲ್ಲಿ ವಿನಾಶಕ ವಿಮಾನದ ಫಿರಂಗಿಗಳಿವೆ ಇಲ್ಲಿ ಓಡಾಡುವ ಚಿಕ್ಕ ರೈಲಿನಲ್ಲಿ ಈಗ ಯಾರೂ ಓಡಾಡುವ ಹಾಗಿಲ್ಲ. ಈ ರೈಲನ್ನು ಎಸ್. ಎಸ್ ಗಾರ್ಡುಗಳೇ ನಡಿಸುವರು. ಇದರ ಪ್ರಯಾಣಿಕರು ಹಿಟ್ಲರ್‌ನನ್ನು ನೋಡುವ ಅಧಿಕಾರಿಗಳು ಮಾತ್ರ. ಈ ಪ್ರದೇಶವೆಲ್ಲಾ ಗೆಸ್ಟಾಪೊದವರ ಅಡಗಲದಲ್ಲಿದೆ.

ಇಲ್ಲಿ ಓಡಾಡುವ ರೈಲ್ವೆ ಪ್ರಯಾಣೀಕರನ್ನು ಈ ಗೆಸ್ಟಾಪೊದವರು ಒಬ್ಬೊಬ್ಬರನ್ನಾಗಿ ವಿಚಾರಿಸಿ ಅನುಮಾನ ಕಂಡವರನ್ನು ಕೂಡಲೆ ಹಿಂದಿರುಗಿಸುವರು. ಇಲ್ಲಿ ರಾಯಭಾರ ನಿರ್ವಾಹಕರನ್ನು ಬಿಡುವುದಿಲ್ಲ.

ಅಲ್ಲೆ ಮತ್ತೊಂದು ಗುಹೆಯಲ್ಲಿ ವಾನ್ ರಿಬ್ಬೆಂಟ್ರಾಪ್ ವಾಸಮಾಡುವನು. ಹಿಟ್ಲರ್‌ನನ್ನು ನೋಡುವವರು

ಮೈಸೂರು ಯುದ್ಧನಿಧಿ ಲಾಟರಿ

ಲಾಟರಿಯಲ್ಲಿ ಈ ರೀತಿ ಬಹುಮಾನ ದೊರೆತಿದೆ:—

ಟಿಕೇಟು ನಂ. 19637 ಶ್ರೀ ಕೋ ಲಾರ ರಾಮು, ಮುಂಡ್ಯ ರೂ. 5122.

ಟಿ. ನಂ. 3378 ಶ್ರೀ ವಿ. ಟಿ. ಮಾಧವ ರಾವ್, ಸೇಲಂ. ರೂ. 2561.

ಟಿ. ನಂ. 97577 ಶ್ರೀ ಸಿದ್ದಲಿಂಗಪ್ಪ ಸಂಜನಗೂಡು ರೂ. 1280.

ಟಿ. ನಂ 82144 ಶ್ರೀ ಎಚ್. ಎಂ. ಶಿವರಾಂ, ಮಲ್ಲೇಶ್ವರ, ರೂ. 640.

ಪಶ್ಚಿಮ ರಣಕ್ಷೇತ್ರದಲ್ಲಿ ಜರ್ಮನ್ ಮುಖ್ಯ ಸೇನಾಪತಿಯಾಗಿದ್ದ ವಾರ್ಡ್‌ಸ್ಟೆಡ್‌ರವರನ್ನು ಹಿಟ್ಲರು ಕೆಲಸದಿಂದ ವಜಾಮಾಡಿರುತ್ತಾನೆ.

ಇವನ ಸಂಗಡ ಮೊದಲು ಇಲ್ಲಿ ಮಾತುಕತೆ ನಡೆಸಬೇಕು.

೨೧ ಮೈಲಿ ಆಳ, ೧೦ ಮೈಲಿ ಉದ್ದದ ಈ ಪ್ರದೇಶವನ್ನು ಸಿಡಿಮದ್ದಿನಿಂದ ಬಿತ್ತಲಾಗಿದೆ. ಬಂದು ಗುಂಡಿ ಅಪುಕಿದರೆ ಸಾಕು. ನಿಮಿಷಾರ್ಧದಲ್ಲಿ ಈ ಭಾಗವು ಛಿದ್ರಛಿದ್ರ ವಾಗುವುದು. ಈ ಗುಂಡಿಯು ಹಿಟ್ಲರ್ ಕೂಡಾ ವಮೇಚಿಸಲ್ಲದೆ.

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಕಿಕ್ಕಿರಿದ ಜನಸಂದಣಿಯಿಂದ ತುಂಬಿದ ಅಮೋಘ 2 ನೇ ವಾರ

At Ranjit Pagli Duniya

ರಣಜಿತ್ ಟಾಕೀಸಿನಲ್ಲಿ

ಪಗಲಿ ದುನಿಯಾ

(ಹಿಂದಿ)

ಮನ್ಮೋಜ್ ಶಾಂತಿ ಮೋತಿಲಾಲ್ - ಷೇಕ್‌ಮುಕ್ತಾರ್

ಪಾತ್ರವಹಿಸಿರುವರು

AT OPERA — DOST

ಅಪೆರಾ ಟಾಕೀಸ್ 2 ನೇ ವಾರ

ಮೋತೀಲಾಲ್, ನೂರ್‌ಜಹಾನ್ ಪಾತ್ರವಹಿಸಿರುವ

ದೋಸ್ತ್ (ಹಿಂದಿ)

— NEXT CHANGE —

Air Raid Wardens

With Stan Laurel & Oliver Hardy

TALK-A-TONE

(The Pioneer Film-mag of S. India)

From 1-3-45 Re. 1 per copy.

Local Agent—D. Mahadev

Opera Talkies, Mysore

Good Coffee

Sastry's Coffee Rooms

Chamarajapuram, Mysore

For Good Printing—

L. N. Press

Srirampet MYSORE

ಅಂದವಾದ ಹೊಲಿಗೆಗೆ

ರೆಡಿಮೇಡ್ ಬಟ್ಟೆಗೆ

— ಸಮ್ಮಲ್ಲಿ ಬನ್ನಿ —

ಶ್ರೀ ಮಹಾಲಕ್ಷ್ಮಿ ಹಾಲ್

ಸಯ್ಯಾಜಿರಾವ್ ರಸ್ತೆ, ಮೈಸೂರು

ಗ್ಲೂ ಕೋ ನೇ ಟ್ — ಡಿ.

.... ಬಿಲ್ಲೆಗಳು ....

ಕ್ಯಾಲ್ಸಿಯಂ ಗ್ಲೂಕೋನೇಟ್

ಮತ್ತು ವಿಟಮಿನ್ ಡಿ. ಮಿಶ್ರಿತವಾಗಿದ್ದು

ಚಾಕೊಲೆಟ್‌ನಂತೆ ರುಚಿಕರವಾಗಿದೆ.

ಕ್ಯಾಲ್ಸಿಯಂ ಅಭಾವದ ಎಲ್ಲಾ ಪರಿಸ್ಥಿತಿಗೂ

ಬಸಿರುತನ ಮತ್ತು ಮಕ್ಕಳು ಸ್ತನಪಾನಮಾಡುವ ಅವಧಿಗೂ,

ಮಕ್ಕಳ ಎಲುಬುಗಳು ಸದೃಢವಾಗಲೂ ಇದನ್ನು

ಶಿಫಾರಸು ಮಾಡಲಾಗಿದೆ.

ಐ. ಟಿ. ಎಲ್. ತಯಾರಿಕೆ

ಗೌರ್ನಮೆಂಟ್ ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್

ಲೆಬೊರೇಟರಿ

ಪೋ: ಬ್ಯಾ. ಮಲ್ಲೇಶ್ವರಂ — ಬೆಂಗಳೂರು

Edited, Printed and published by M. S. Krishna Rao, at the Satyavadi Press, Chamaraja Agrahar, Mysore